# ನಪಾಸಿಗೆ ಅವಕಾಶ ಕಲ್ಪಿಸುವ ನಿರ್ಧಾರ ವ್ಯವಸ್ಥೆಯ ಲೋಪಕ್ಕೆ ಮಕ್ಕಳಿಗೆ ಶಿಕ್ಷೆಯೇ?

ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಸಂಬಂಧಿಸಿದ ನಮ್ಮ ನೀತಿಗಳು ತೀರಾ ಅಸ್ಥಿರವಾಗಿರುತ್ತವೆ. ಬದಲಾವಣೆಗಳು ಅಪಕ್ವ ಎನ್ನುವ ರೀತಿಯಲ್ಲಿ ಸಂಭವಿಸುತ್ತಿರುತ್ತವೆ. ಮಕ್ಕಳನ್ನು ಪದೇ ಪದೇ ಅಂತಹ ಪ್ರಯೋಗಕ್ಕೆ ಒಡ್ಡುವುದು ಸರಿಯಲ್ಲ. ಪರಿಷ್ಕರಣೆಯ ಘೋಷಿತ ಉದ್ದೇಶ ಮೇಲ್ನೋಟಕ್ಕೆ ಒಳ್ಳೆಯದು ಅನ್ನಿಸಿದರೂ ದೂರಗಾಮಿ ಪರಿಣಾಮಗಳನ್ನು ಲೆಕ್ಕಿಸದೆ ದಿಢೀರನೆ ಕೈಗೊಳ್ಳುವ ನಿರ್ಧಾರಗಳಿಂದ ಹೆಚ್ಚಿನ ಸಂದರ್ಭಗಳಲ್ಲಿ ಉದ್ದೇಶ ಈಡೇರದೇ ಇರುವ ಸಾಧ್ಯತೆಯೇ ಹೆಚ್ಚು.

ಶಾಲಾ ಮಕ್ಕಳ ಅನುತ್ತೀರ್ಣತೆಗೆ ಸಂಬಂಧಿಸಿದಂತೆ ಕೆಲವು ವರ್ಷಗಳಿಂದ ಪಾಲನೆಯಲ್ಲಿದ್ದ ನಿಲುವು ಈಗ ಮಗ್ಗುಲು ಬದಲಿಸಿದೆ. ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಡುವ ಕೇಂದ್ರೀಯ ವಿದ್ಯಾಲಯ, ಜವಾಹರ್ ನವೋದಯ ವಿದ್ಯಾಲಯ, ಸೈನಿಕ ಶಾಲೆಯಂತಹವುಗಳಿಗೆ ಅನ್ವಯ ಆಗುವಂತೆ ಪಾಸು–ಫೇಲಿಗೆ ಸಂಬಂಧಿಸಿದಂತೆ ಇದುವರೆಗೂ ಜಾರಿಯಲ್ಲಿದ್ದ ನೀತಿಯೊಂದು ಈಗ ವಿರುದ್ಧ ದಿಕ್ಕಿಗೆ ಹೊರಳಿಕೊಂಡಿದೆ.

ಕೇಂದ್ರ ಸರ್ಕಾರದ ಅಧೀನದ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಐದನೆಯ ಹಾಗೂ ಎಂಟನೆಯ ತರಗತಿಯ ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಬೇಕಿರುವ ಅರ್ಹತೆಯನ್ನು ಪ್ರದರ್ಶಿಸದೇ ಇದ್ದರೆ ಅವರನ್ನು ಅನುತ್ತೀರ್ಣಗೊಳಿಸಲು ಹೊಸ ನೀತಿಯು ಅವಕಾಶ ಕಲ್ಪಿಸುತ್ತದೆ. ಹೀಗೆ ಫೇಲಾದ ವಿದ್ಯಾರ್ಥಿಗಳಿಗೆ ಎರಡು ತಿಂಗಳ ನಂತರ ಹೊಸದಾಗಿ ಪರೀಕ್ಷೆ ಎದುರಿಸಲು ಅವಕಾಶ ಇರುತ್ತದೆ. ಆಗಲೂ ಅವರು ಉತ್ತೀರ್ಣರಾಗದಿದ್ದರೆ, ಒಂದು ವರ್ಷದ ಮಟ್ಟಿಗೆ ಅವರನ್ನು ಅದೇ ತರಗತಿಯಲ್ಲಿ ಇರಿಸಿಕೊಳ್ಳಲಾಗುತ್ತದೆ.

ಶಿಕ್ಷಣ ಹಕ್ಕು ಯೋಜನೆ (2009) ಒಪ್ಪಿಕೊಂಡಿದ್ದ 'ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಪದ್ಧತಿ' (ಸಿಸಿಇ) ಹಾಗೂ ಎಂಟನೆಯ ತರಗತಿವರೆಗೆ ಅನುತ್ತೀರ್ಣ ಇಲ್ಲ ಎಂಬ ನೀತಿಗೆ ಈ ಹೊಸ ನೀತಿಯು ವಿರುದ್ಧವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ನಿಗಾ ಇರಿಸುವುದು ಹಾಗೂ ಅವರನ್ನು ಅನುತ್ತೀರ್ಣಗೊಳಿಸುವ ಅಗತ್ಯವನ್ನೇ ಇಲ್ಲವಾಗಿಸುವುದು ಸಿಸಿಇ ಉದ್ದೇಶವಾಗಿತ್ತು.

ಅನುತ್ತೀರ್ಣಗೊಳಿಸದೇ ಇರುವ ನೀತಿ ಕುರಿತ ಮರುಚಿಂತನೆಯು 2019ರಿಂದಲೇ ಆರಂಭವಾಯಿತು. ಈ ನೀತಿಯ ಬಗ್ಗೆ ತೀರ್ಮಾನ ಕೈಗೊಳ್ಳುವುದನ್ನು ಕೇಂದ್ರ ಸರ್ಕಾರವು ಆಗ ರಾಜ್ಯಗಳ ವಿವೇಚನೆಗೆ ಬಿಟ್ಟಿತು. ಅದರ ಅನುಸಾರ ಕೆಲವು ಕೇಂದ್ರಾಡಳಿತ ಪ್ರದೇಶಗಳೂ ಒಳಗೊಂಡಂತೆ 18 ರಾಜ್ಯಗಳು ಅನುತ್ತೀರ್ಣಗೊಳಿಸದೇ ಇರುವ ನೀತಿಯನ್ನು ಕೈಬಿಟ್ಟವು. ಇನ್ನುಳಿದ ರಾಜ್ಯಗಳು ಈ ನೀತಿಯನ್ನು ಉಳಿಸಿಕೊಳ್ಳುವ ತೀರ್ಮಾನಕ್ಕೆ ಬಂದವು. ಕರ್ನಾಟಕವು ಎಂಟನೇ ತರಗತಿಯವರೆಗಿನ ವಿದ್ಯಾರ್ಥಿಗಳನ್ನು ಫೇಲು ಮಾಡದೇ ಇರುವ ನೀತಿಯನ್ನು ಹೊಂದಿದೆ.

ಈಗ ಕೇಂದ್ರ ಶಿಕ್ಷಣ ಸಚಿವಾಲಯವು ಅನುತ್ತೀರ್ಣಗೊಳಿಸದೇ ಇರುವ ನೀತಿಯನ್ನು ಕೈಬಿಡುತ್ತಿರುವುದಾಗಿ ಪ್ರಕಟಿಸಿದ ನಂತರವೂ ತಮಿಳುನಾಡು ಸರ್ಕಾರವು ಈ ನೀತಿಯನ್ನು ತಾನು ಕೈಬಿಡುವುದಿಲ್ಲ ಎಂದು ತಿಳಿಸಿದೆ. ನೀತಿಯನ್ನು ಕೈಬಿಟ್ಟಲ್ಲಿ ಬಡ ವರ್ಗಗಳಿಗೆ ಸೇರಿದ ಮಕ್ಕಳಿಗೆ ತೊಂದರೆ ಆಗುತ್ತದೆ ಎಂದು ತಮಿಳುನಾಡು ಸರ್ಕಾರ ಪ್ರತಿಪಾದಿಸಿದೆ. ಕರ್ನಾಟಕದಲ್ಲಿ ಈ ವಿಚಾರವಾಗಿ ಶಾಲಾ ಆಡಳಿತ ಮಂಡಳಿಗಳು ಹಾಗೂ ಅವುಗಳ ಸಂಘಟನೆಗಳು ಭಿನ್ನ ನಿಲುವು ಹೊಂದಿವೆ.

ಮಕ್ಕಳ ಕಲಿಕಾ ಮಟ್ಟವು ಕಡಿಮೆ ಇದ್ದುದು ಈ ನೀತಿಯಲ್ಲಿ ಬದಲಾವಣೆಗೆ ಕಾರಣ ಎಂದು ಹೇಳಲಾಗುತ್ತಿದೆ. ಹಲವು ಮಕ್ಕಳು ತಮ್ಮ ವಯಸ್ಸು ಹಾಗೂ ತರಗತಿಗೆ ತಕ್ಕುದಾದ ಕಲಿಕೆ ಮತ್ತು ಸಂಖ್ಯಾಜ್ಞಾನವನ್ನು ಹೊಂದಿಲ್ಲ ಎಂಬುದನ್ನು ವರದಿಗಳು ಹೇಳಿವೆ. ಜೀವನಕ್ಕೆ ಅಗತ್ಯವಿರುವ ಜ್ಞಾನ ಮತ್ತು ಶಿಕ್ಷಣವು ಮಕ್ಕಳಿಗೆ ಶಾಲೆಗಳಿಂದ ಸಿಗಬೇಕು. ಅದು ಸಿಗದೇ ಹೋದಲ್ಲಿ ಶಾಲಾ ಶಿಕ್ಷಣದ ಉದ್ದೇಶವೇ ಸೋಲುತ್ತದೆ ಎಂಬುದು ನಪಾಸಿಗೆ ಅವಕಾಶ ಇರಬೇಕು ಎಂದು ವಾದಿಸುವವರ ಪ್ರತಿಪಾದನೆ.

ಆದರೆ ಸಾರ್ವತ್ರಿಕ ಶಿಕ್ಷಣದ ಪರಿಕಲ್ಪನೆಯ ಅಡಿಯಲ್ಲಿ ಅನುತ್ತೀರ್ಣಗೊಳಿಸದೇ ಇರುವ ನೀತಿಯನ್ನು ಜಾರಿಗೆ ತರಲಾಗಿತ್ತು. ಮಕ್ಕಳು ಶಾಲೆಗಳನ್ನು ತೊರೆಯುವುದಕ್ಕೆ ಅನುತ್ತೀರ್ಣತೆಯು ಪ್ರಮುಖ ಕಾರಣ ಎಂಬುದು ಕೆಲವು ಅಧ್ಯಯನಗಳಿಂದ ಗೊತ್ತಾಗಿದೆ. ಆರ್‌ಟಿಇ ಕಾನೂನು ರೂಪಿಸುವ ಸಮಯದಲ್ಲಿ ಶಾಲೆ ತೊರೆಯುವ ಮಕ್ಕಳ ಪ್ರಮಾಣವು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶೇ. 43.5ರಷ್ಟು ಇತ್ತು. ಈಗ ಅದು ಶೇ. 12.6ಕ್ಕೆ ಬಂದಿದೆ. ಈ ಪ್ರಮಾಣ ಕೂಡ ಹೆಚ್ಚೇ. ಹೀಗಿರುವಾಗ ನಪಾಸಿಗೆ ಅವಕಾಶ ಕಲ್ಪಿಸುವುದು ಎಷ್ಟು ಸರಿ ಎಂಬುದು ಫೇಲ್ ಮಾಡುವುದು ಬೇಡ ಎನ್ನುವವರ ಪ್ರಶ್ನೆ.

ಅನುತ್ತೀರ್ಣಗೊಂಡಾಗ ಕೆಲವು ಮಕ್ಕಳು ಎದುರಿಸುವ ಅವಮಾನವು ಅವರು ಶಾಲೆ ತೊರೆಯುವಂತೆ ಮಾಡಬಹುದು. ಮಕ್ಕಳು ಅನುತ್ತೀರ್ಣವಾಗುವುದಕ್ಕೆ ಅವರಷ್ಟೇ ಕಾರಣರಲ್ಲ. ಕುಟುಂಬ, ಶಾಲೆ ಮತ್ತು ಸುತ್ತಲಿನ ಪರಿಸರ ಕೂಡ ಅನುತ್ತೀರ್ಣಕ್ಕೆ ಕಾರಣವಾಗುತ್ತವೆ. ವ್ಯವಸ್ಥೆಯ ಲೋಪಕ್ಕೆ ಮಕ್ಕಳಿಗೆ ಶಿಕ್ಷೆ ವಿಧಿಸಬೇಕೇ ಎಂಬ ಪ್ರಶ್ನೆಯಲ್ಲಿ ಹುರುಳಿದೆ. ಈ ವಿಷಯ ಕೂಲಂಕಷವಾಗಿ ಚರ್ಚೆಗೆ ಒಳಗಾಗಬೇಕಾದುದು ಈ ಕ್ಷಣದ ಅಗತ್ಯ.

**■ ಎನ್. ಉದಯಕುಮಾರ್**

**ಅನುತ್ತೀರ್ಣಗೊಂಡಾಗ ಕೆಲವು ಮಕ್ಕಳು ಎದುರಿಸುವ ಅವಮಾನವು ಅವರು ಶಾಲೆ ತೊರೆಯುವಂತೆ ಮಾಡಬಹುದು. ಮಕ್ಕಳು ಅನುತ್ತೀರ್ಣವಾಗುವುದಕ್ಕೆ ಅವರಷ್ಟೇ ಕಾರಣರಲ್ಲ. ಕುಟುಂಬ, ಶಾಲೆ ಮತ್ತು ಸುತ್ತಲಿನ ಪರಿಸರ ಕೂಡ ಅನುತ್ತೀರ್ಣಕ್ಕೆ ಕಾರಣವಾಗುತ್ತವೆ. ವ್ಯವಸ್ಥೆಯ ಲೋಪಕ್ಕೆ ಮಕ್ಕಳಿಗೆ ಶಿಕ್ಷೆ ವಿಧಿಸಬೇಕೇ ಎಂಬ ಪ್ರಶ್ನೆಯಲ್ಲಿ ಹುರುಳಿದೆ.**




ಈಶ್ವರ್